ನಾನು ಹೇಳಲಿಕ್ಕೆ ಬಂದಿದ್ದು ಬರೀ ಒಂದು ತಿಂಗಳ ಮಾತಲ್ಲ; ಶಾಶ್ವತವಾಗಿ ನೀನು ಅಂಗಡಿಯನ್ನು ಮುಚ್ಚು ಅಂತಾನೆ ಕೇಳಿಕೊಳ್ಳಾಕ್ಕೆ ಬಂದಾಂವ. ಆದರೆ ಸದ್ಯ ಅದನ್ನ ನಾನು ಹೇಳೋಲ್ಲ ಮುಂದಿನ ಮಾತು ಮುಂದೆ. ತಾಳುಗುಪ್ಪಾದಲ್ಲಿ ಇರೋ, ಅನುರಾಗ್ ಬಾರ್‌ನವರು ಒಪ್ಪಿಕೊಂಡಿದಾರಂತೆ; ಮುರಡೇಶ್ವರದೋರು ನಾಳೆಯಿಂದಾನೆ ಬಂದ್ ಅಂತಿದಾರೆ. ಅಷ್ಟೇ ಯಾಕೆ, ಸಿರಿವಂತೇಲಿರೋ ರಾಘವೇಂದ್ರ ವೈನ್ಸ್‌ನವರು, 'ಆಯ್ತು ಒಳ್ಳೇ ಕೆಲ್ಸ ಮಾಡ್ತಿದೀರಿ, ನಮ್ಮ ಸಹಕಾರ ಅಂತೂ ಇದ್ದೇ ಇದೆ' ಅಂತ ಹೇಳಿದಾರೆ.''

ರಘು ತನ್ನ ಹಿಂದಿನ ವರಸೆಯನ್ನು ಮುಂದುವರಿಸಿದ:

"ನೋಡಪ್ಪಾ, ಅವ್ರೆಲ್ಲಾ ಕೋಟಿಗಟ್ಟಲೆ ದುಡ್ಡಿರೋರು. ಅವ್ರೀಗೆ ಒಂದು ಮುಚ್ಚಿದರೆ, ಇನ್ನೊಂದು ನಡೀತಿರುತ್ತೆ. ನಂದು ಹಾಗಲ್ಲ; ನಾನು ಶುರುಮಾಡಿ ಎರಡು ವರ್ಷ ಆಯ್ತು ಅಷ್ಟೆ. ಸಿರಿವಂತೇಂವ ಯಾಕೆ ಹಾಗಂದ ಅಂದ್ರೆ, ಅವನೀಗೆ ಲೈಸೆನ್ಸೇ ಇಲ್ಲ! ಇಷ್ಟು ಹೇಳಿದ ಮೇಲೂ ಒತ್ತಾಯ ಮಾಡ್ತೀರಿ ಅಂದ್ರೆ, ನನ್ನ ಮಾತು ಇಷ್ಟೆ: ನಿಮ್ಮ ಹಾಗೇ ನಮ್ಮದೂ ಒಂದು ಸಂಘ ಇದೆ, ಅವರನ್ನ ಕೇಳಿ ನಾನು ಅವರ ಮಾತಿನಂತೆ ನೆಡ್ಕೋತೀನಿ.''

"ನೀವೆಲ್ಲಾ ಹಿಂಗೇ ಹೇಳ್ತೀರಿ ಅಂತ ಗೊತ್ತಿತ್ತು; ಅದಕ್ಕೆ, ನಾವು ಮೊದಲು ಅಪ್ರೋಚ್ ಮಾಡಿದ್ದೇ ನಿಮ್ಮ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನ; ಅವ್ರು ಬಹುತೇಕ ಒಪ್ಪಿಕೊಂಡಿದಾರೆ.''

"ನಮ್ಮ ಸಂಗ ಅಂದ್ರೆ ಅದೊಂದೇ ಅಲ್ಲಪ್ಪ, ನವ ಕರ್ನಾಟಕ ಒಕ್ಕೂಟದೋರು; ಅವರು ನಮಗೆ ಫುಲ್ ಸಪೋರ್ಟನ್ನು ಕೊಡ್ತಾ ಬಂದಿದಾರೆ. ಬರೀ ಒಂದು ಮಿಸ್‌ಕಾಲ್ ಕೊಟ್ರೆ ಸಾಕು... ಅರ್ಧ ಗಂಟೆ ಒಳಗೆ ಇಲ್ಲಿರ್ತಾರೆ. ಅಷ್ಟು ಸಪೋರ್ಟಿಲ್ಲದೆ ಈ ದಂಧೆಗೆ ಇಳಿಯೋಕಾಗುತ್ತಾ? ಉಳಿಯೋಕಾಗುತ್ತಾ? ರಾಜೇಶಾ, ಯಾವುದಕ್ಕೂ ನಾನು ಅವರನ್ನು ಒಂದ್ಮಾತು ಕೇಳಿ ನಿಂಗೆ ಹೇಳ್ತಿನಿ ಕಣಪ್ಪಾ."

"ಆಯ್ತಪ್ಪಾ, ನೀನು ಈಗಲೇ ನಿಮ್ಮ ಸಂಗದೋರಿಗೆ ಮಿಸ್‌ಕಾಲ್ ಕೊಡಬೇಡ ಮಾರಾಯ, ನಾನು ಮನೇನಲ್ಲಿ ಹೇಳಿಬಂದಿಲ್ಲ! ಇನ್ನೊಮ್ಮೆ ನಾವೆಲ್ಲರೂ ಬರ್ತೀವಿ, ಆವಾಗ ಬೇಕಾದರೆ ಕೊಡಬಹುದು!"

★★★

ರಘು ಶೆಟ್ಟಿಗೆ ಲಘುವಾಗಿ ಬೆದರಿಕೆ ಹಾಕಿ ಬಂದ ರಾಜೇಶ, ಹೆದ್ದಾರಿಯ ಪಕ್ಕದ ಬದಿಯಲ್ಲಿಯೇ ಇದ್ದ ಆಲಹಳ್ಳಿಯಲ್ಲಿ ಕಳ್ಳಭಟ್ಟಿ ಹೆಂಡವನ್ನು ಮಾರಾಟ ಮಾಡುತ್ತಿದ್ದ ಸರೋಜಮ್ಮನ ಸೊಸೆಗೂ ತಾಳಗುಪ್ಪಾದ ಶಿಬಿರದ ಬಗ್ಗೆ ಹೇಳಿ, ಅವಳ ಸಹಕಾರವನ್ನು ಕೋರುತ್ತಲೇ ಸ್ವಲ್ಪ ಬಿಸಿ ಮುಟ್ಟಿಸಿ ಬರಬೇಕೆಂದುಕೊಂಡ. ಆದರೆ, ಅವಳ ಮನೆಯ ಮುಂದೆ ಬೈಕು ನಿಲ್ಲಿಸುತ್ತಿದ್ದಂತೆ, ಅವನ ವಿವೇಕ ಚುರುಕಾಯಿತು.

ಸರೋಜಮ್ಮನ ಬಾಯಿ ಎಂದರೆ ಸುತ್ತಮುತ್ತಲ ಊರೇ ಹೆದರುತ್ತದೆ. ಸುಮಾರು ಎಪ್ಪತ್ತು ಮೀರಿದ ಆ ಹೆಂಗಸು, ಅಶ್ಲೀಲ ಬೈಗುಳಗಳನ್ನು ಎಷ್ಟು ಲೀಲಾಜಾಲವಾಗಿ ಆಡುತ್ತಿದ್ದಳೆಂದರೆ, ಜಗಳಗಂಟ ಗಂಡಸರೂ ಅವಳ ಮಾತಿಗೆ ತಲೆತಗ್ಗಿಸಿ ಸುಮ್ಮನಾಗಿಬಿಡುತ್ತಿದ್ದರು. ಅವಳ ಹಿರಿಯ ಮಗ ಮತ್ತು ಸೊಸೆ ಇವಳೊಂದಿಗೆ ಬದುಕಲಾರದೆ ಹೊಲ ಮನೆಗಳನ್ನೆಲ್ಲಾ ಇವಳಿಗೇ ಬಿಟ್ಟು ತಾಳಗುಪ್ಪದಲ್ಲಿ ಗೂಡಂಗಡಿಯನ್ನು ಇಟ್ಟುಕೊಂಡು ಹೇಗೋ ಬದುಕು ನಡೆಸುತ್ತಿದ್ದರು. ಎರಡನೆಯ ಮಗ ಭುಜಂಗನೂ ತಾಯಿಯನ್ನು ಬಿಟ್ಟು ಬೇರೆ ಸಂಸಾರವನ್ನು ನಡೆಸುತ್ತಿದ್ದನೋ